**Code No. 16 X**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರವೀಣ ದರ್ಜೆ – ಪ್ರಥಮ ಪತ್ರಿಕೆ

## (ವೇಗ)

ಜನವರಿ, 2019

ವೇಳೆ { ಉಕ್ತಲೇಖನ : 7 ನಿಮಿಷಗಳು
ಲಿಪಿ ಬರಹ : 1 ಗಂಟೆ 45 ನಿಮಿಷಗಳು }

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಅವರ ಶೀಘ್ರಲಿಪಿಯನ್ನು ಕನ್ನಡ ಲಿಪಿಗೆ ಪರಿವರ್ತನೆ ಮಾಡಿ ಬರೆಯಲು ಸೂಚಿಸತಕ್ಕದ್ದು.

---

ಸನ್ಮಾನ್ಯ ಸಭಾಧ್ಯಕ್ಷರೇ,

ಕರ್ನಾಟಕದ ಪ್ರಜ್ಞಾವಂತ ಜನತೆಯ
ಬೆಂಬಲ ಮತ್ತು ವಿಶ್ವಾಸದೊಂದಿಗೆ ನಮ್ಮ
ಸರ್ಕಾರವು ಜನಪರ ಆಡಳಿತದ ಮೂರನೇ
ವರ್ಷಾಚರಣೆಯ ಹೊಸ್ತಿಲಿನಲ್ಲಿದೆ. ಈ
$\frac{1}{4}$ ಹೊತ್ತಿನಲ್ಲಿ ನಮ್ಮ ಸರ್ಕಾರದ ನಡೆ/ಯನ್ನು
ಒಮ್ಮೆ ಹಿಂತಿರುಗಿ ನೋಡಿದರೆ ನನ್ನಲ್ಲಿ
ಧನ್ಯತೆಯ ಭಾವ ಮೂಡುತ್ತಿದೆ. ಚುನಾವಣೆಯ
ಸಂದರ್ಭದಲ್ಲಿ ರಾಜ್ಯದ ಜನತೆಗೆ ನೀಡಿದ್ದ
ಬಹುತೇಕ ಭರವಸೆಗಳನ್ನು ಈಡೇರಿಸುವ ಸಂತಸ
$\frac{1}{2}$ ಗರಿಗೆದರುತ್ತಿದೆ. ನುಡಿದಂತೆ/ ನಡೆದಿರುವ ಈ
ಸಂತೃಪ್ತಿ ಮತ್ತು ಹೆಮ್ಮೆಪಡುವ ನಾನು ನಮ್ಮ
ಸರ್ಕಾರದ ಆಯವ್ಯಯವನ್ನು ಮಂಡಿಸುತ್ತಿದ್ದೇನೆ.

ಸಾಮಾಜಿಕ ನ್ಯಾಯದ ಪರಿಕಲ್ಪನೆ ಮತ್ತು
ಆಧುನಿಕ ಮುನ್ನೋಟದ ಕಾರ್ಯಶೈಲಿ ನಮ್ಮ
ಸರ್ಕಾರದ ಮುನ್ನಡೆಯ ಮಾರ್ಗದ/ರ್ಶಿ $\frac{3}{4}$
ಸೂತ್ರಗಳಾಗಿವೆ. ಇವೆರಡನ್ನೂ ಸಮನ್ವಯಗೊಳಿಸಿ
ಪ್ರಗತಿಪಥದಲ್ಲಿ ಸಾಗುತ್ತಿರುವ ಸಮಾಜಮುಖಿ
ಸರ್ಕಾರ ನಮ್ಮದು. ಕರ್ನಾಟಕದ ಎಲ್ಲ ಸಾಧನೆ
ಹಾಗೂ ಮನ್ನಣೆಗೆ ನಮ್ಮ ಸರ್ಕಾರವು ಕಳೆದ
ಮೂರು ವರ್ಷಗಳಲ್ಲಿ ರೂXಪಿಸಿ 1
ಅನುಷ್ಠಾನಗೊಳಿಸಿರುವ ಜನಪರ ಯೋಜನೆಗಳು
ಮತ್ತು ಆಧುನಿಕ ಮುನ್ನೋಟದ
ಕಾರ್ಯನೀತಿಗಳೇ ಕಾರಣ ಎನ್ನುವುದನ್ನು ನಾನು

ಈ ಗೌರವಾನ್ವಿತ ಸದನದಲ್ಲಿ ಹೆಮ್ಮೆಯಿಂದ
ಹೇಳಿಕೊಳ್ಳುತ್ತೇನೆ. ರಾಜ್ಯದ ಸಾಧನೆಯಲ್ಲಿ
$\frac{1}{4}$ ಸ/ರ್ಕಾರದೊಡನೆ ಸಹಕರಿಸಿದ ಸದನದ ಎಲ್ಲಾ
ಗೌರವಾನ್ವಿತ ಸದಸ್ಯರಿಗೆ ನಾನು ಅಭಿನಂದನೆ
ಮತ್ತು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕೆಲಸಗಾರರು, ಉದ್ಯೋಗ ಪ್ರತಿನಿಧಿಗಳು,
ನಿಯೋಜಕರು ಮತ್ತು ಇಲಾಖಾ
$\frac{1}{2}$ ಅಧಿ/ಕಾರಿಗಳಿಗೆ ಅಗತ್ಯ ತರಬೇತಿ ನೀಡಲು
ಇಪ್ಪತ್ತು ಕೋಟಿ ರೂಪಾಯಿಗಳ ವೆಚ್ಚದಲ್ಲಿ
ಕರ್ನಾಟಕ ಕಟ್ಟಡ ನಿರ್ಮಾಣದ ಕಾರ್ಮಿಕ
ಸಂಸ್ಥೆಯನ್ನು ಅನುಮೋದಿಸಿದೆ. ಈ
ಸಂಸ್ಥೆಯನ್ನು ಅಸಂಘಟಿತ ಕೆಲಸಗಾರರ
$\frac{3}{4}$ ತರಬೇತಿ ಸಂ/ಸ್ಥೆಯಾಗಿ ಪರಿವರ್ತಿಸಲು ಸಹ
ಉದ್ದೇಶಿಸಿದೆ ಮತ್ತು ಕಾರ್ಮಿಕ ಸುಧಾರಣೆ,
ಕಾರ್ಮಿಕ ಕಲ್ಯಾಣ ಮತ್ತು ಅಧ್ಯಯನಗಳ
ಸಂಶೋಧನಾ ಸಂಸ್ಥೆಯಾಗಿ ಸಹ
ಅಭಿವೃದ್ಧಿಪಡಿಸಲು ಉದ್ದೇಶಿಸಿದೆ.

ಕರ್ನಾಟಕದ ಈ ಎಲ್ಲ ಸಾಧನೆ,
2 ಮನ್ನXಣೆಗೆ ನಮ್ಮ ಸರ್ಕಾರವು ಕಳೆದ ಮೂರು
ವರ್ಷಗಳಲ್ಲಿ ರೂಪಿಸಿ ಅನುಷ್ಠಾನಗೊಳಿಸಿರುವ
ಜನಪರ ಯೋಜನೆಗಳು ಮತ್ತು ಆಧುನಿಕ
ಮುನ್ನೋಟದ ಕಾರ್ಯನೀತಿಗಳೇ ಕಾರಣ
ಎನ್ನುವುದನ್ನು ನಾನು ಈ ಗೌರವಾನ್ವಿತ
ಸದನದ/ಲ್ಲಿ ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. $\frac{1}{4}$
ರಾಜ್ಯದ ಈ ಸಾಧನೆಯಲ್ಲಿ ಸರ್ಕಾರದೊಡನೆ
ಸಹಕರಿಸಿದ ಸದನದ ಎಲ್ಲಾ ಗೌರವಾನ್ವಿತ
ಸದಸ್ಯರಿಗೆ ನಾನು ಅಭಿನಂದನೆ ಮತ್ತು
ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ರೇಷ್ಮೆ ಆಮದು
ಸುಂ/ಕವನ್ನು ಶೇಕಡ ಹದಿನೈದರಿಂದ ಶೇಕಡ $\frac{1}{2}$
ಹತ್ತಕ್ಕೆ ಇಳಿಸಿದ್ದರಿಂದಾಗಿ ರೇಷ್ಮೆ
ಮಾರುಕಟ್ಟೆಯಲ್ಲಿ ಪ್ರತಿಕೂಲ ಪರಿಸ್ಥಿತಿ
ಉದ್ಭವಿಸಿ ಕಳೆದ ವರ್ಷ ರೇಷ್ಮೆ ಬೆಳೆಗಾರರು
ಹಾಗೂ ಡೀಲರುಗಳು ಆತಂಕಕ್ಕೆ
ಒಳಗಾಗಿದ್ದರು. ಮಾ/ರುಕಟ್ಟೆ ದರಗಳು $\frac{3}{4}$
ಉತ್ಪಾದನಾ ವೆಚ್ಚ ಭರಿಸಬೇಕೆಂಬುದು
ರೇಷ್ಮೆ ಬೆಳೆಗಾರರು ಮತ್ತು ಡೀಲರುಗಳ
ನಿರೀಕ್ಷೆಯಾಗಿತ್ತು. ನಮ್ಮ ಸರ್ಕಾರ ಸುಸ್ಥಿರ
ರೇಷ್ಮೆ ಕೃಷಿಯನ್ನು ಮುಂಚೂಣಿಗೆ ತರುವ
ನಿಟ್ಟಿನಲ್ಲಿ ರೇಷ್ಮೆ ಹುಳು ತಳಿ ಅಭಿವೃದ್ಧಿ,
ಸಂXರಕ್ಷಣೆ ಮತ್ತು ಅಭಿವೃದ್ಧಿಯೂ ಸೇರಿದಂತೆ 3
ತಾಂತ್ರಿಕ ಅನ್ವೇಷಣೆಗಳಿಗಾಗಿ ಸಂಶೋಧನೆ
ಮತ್ತು ಅಭಿವೃದ್ಧಿಗಾಗಿ ಎಂಭತ್ತರ ದಶಕದಲ್ಲಿ
ತಲಘಟ್ಟಪುರದಲ್ಲಿ ಸ್ಥಾಪಿಸಿರುವ ಕರ್ನಾಟಕ
ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿ/ವೃದ್ಧಿ $\frac{1}{4}$
ಸಂಸ್ಥೆಯ ಬಲವರ್ಧನೆ ಮಾಡಲಿದೆ.

ಜನರ ಪಾಲ್ಗೊಳ್ಳುವಿಕೆಯ ಭದ್ರ
ಬುನಾದಿಯ ಮೇಲೆ ಮಹಾತ್ಮಾ
ಗಾಂಧೀಜಿಯವರ ಕನಸಿನ ಗ್ರಾಮ ಸ್ವರಾಜ್ಯ
ನಿರ್ಮಾಣ ಮಾಡುವ, ಅಧಿಕಾರ ವಂಚಿತ
1/2 ವರ್ಗಕ್ಕೆ ಅಧಿಕಾರ ನೀಡುವ, ಗ್ರಾಮೀಣ/
ಬದುಕಿನಲ್ಲಿ ಸ್ವಾವಲಂಬಿ, ಪರಸ್ಪರ ಗೌರವ,
ಘನತೆ ಕಾಪಾಡುವ, ಸಮಾನತೆಯನ್ನು
ಸಾಧಿಸುವ ಸದುದ್ದೇಶದಿಂದ ನಮ್ಮ ಸರ್ಕಾರ
ಕಳೆದ ಅಧಿವೇಶನದಲ್ಲಿ ಮಂಡಿಸಿರುವ
ಕ್ರಾಂತಿಕಾರಕ ಗ್ರಾಮ ಸ್ವರಾಜ್ ಹಾಗೂ
3/4 ಪಂಚಾಯತ್/ ರಾಜ್ ಕಾಯಿದೆ ತಿದ್ದುಪಡಿ
ಅಂಗೀಕಾರಗೊಂಡು ಕಾಯಿದೆಯಾಗಿ
ಅನುಷ್ಠಾನಕ್ಕೆ ಬಂದಿರುತ್ತದೆ. ಗ್ರಾಮೀಣ
ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರಲು
ನೀರಿನ ವಿಷಯದಲ್ಲಿ ಸಮಾನತೆಯನ್ನು
4 ಸಾಧಿಸಲು ಸರ್ಕಾರವು ದೃಢವಾXದ ಹೆಜ್ಜೆಗಳನ್ನು
ಇರಿಸಿದೆ. ಪ್ರತಿಯೊಂದು ಗ್ರಾಮದ ಐತಿಹಾಸಿಕ
ಹೊಂದಿರುವ ಗ್ರಾಮ ಚರಿತ ಕೋಶವನ್ನು
ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ
ಸಹಯೋಗದೊಂದಿಗೆ ಹೊರ ತರಲು ಉದ್ದೇಶ
1/4 ಹೊಂದಿದ್ದು, ಈಗಾಗಲೇ ಬಾಗ/ಲಕೋಟೆ
ಹಾಗೂ ಹಾವೇರಿ ಜಿಲ್ಲೆಯ ಗ್ರಾಮ ಚರಿತ
ಕೋಶವನ್ನು ಕ್ರೋಢೀಕರಿಸಿ ಬಿಡುಗಡೆ
ಗೊಳಿಸಲಾಗಿದೆ.

ಬೆಂಗಳೂರು ಮಹಾನಗರವು ಕರ್ನಾಟಕದ
ಪ್ರಗತಿ ಕೇಂದ್ರ; ರಾಷ್ಟ್ರ ಪ್ರಗತಿಯ ಚಾಲನಾ
ಇಂಜಿನ್, ಭಾರತದ ಮಾಹಿತಿ ತಂ/ತ್ರಜ್ಞಾನ 1/2
ಮತ್ತು ನವೋದ್ಯಮಗಳ ರಾಜಧಾನಿ ಇತ್ಯಾದಿ
ಹೆಸರುಗಳಿಂದ ಖ್ಯಾತವಾಗಿದೆ. ವಿವಿಧ
ಸಂಸ್ಥೆಗಳಡಿಯಲ್ಲಿ ಬೆಂಗಳೂರಿಗೆ ನೀಡುತ್ತಿರುವ
ಅನುದಾನವನ್ನು ಸಮರ್ಥವಾಗಿ ಸಂಯೋಜಿಸಿ
'ಬ್ರ್ಯಾಂಡ್ ಬೆಂಗಳೂರು' ವರ್ಚಸ್ಸಿಗೆ ಹೊ/ಸ 3/4
ತೇಜಸ್ಸು ಮೂಡಿಸಲು ನಮ್ಮ ಸರ್ಕಾರವು
ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಬೃಹತ್
ಬೆಂಗಳೂರು ಮಹಾನಗರ ಪಾಲಿಕೆಗೆ
ಹೆಚ್ಚುವರಿ ಸಂಪನ್ಮೂಲಗಳನ್ನು ಒದಗಿಸುವ
ಅವಶ್ಯಕತೆಯನ್ನು ಮನಗಂಡಿದ್ದೇವೆ. ಕರ್ನಾಟಕ
ರಾXಜ್ಯದಲ್ಲಿರುವ ಅನೇಕ ನಗರಗಳಲ್ಲಿರುವ 5
ಸರ್ಕಾರಿ ಸಂಸ್ಥೆಗಳು ನಗರ ಸಾರಿಗೆ
ಯೋಜನೆಗಳನ್ನು ವೈಜ್ಞಾನಿಕವಾಗಿ ತಯಾರಿಸಲು
ಹಾಗೂ ಅನುಷ್ಠಾನಗೊಳಿಸಲು ನಗರ ಭೂ
ಸಾರಿಗೆ ನಿರ್ದೇಶನಾಲಾಯವು ತಾಂತ್ರಿಕ
ನೆರ/ವನ್ನು ಒದಗಿಸುತ್ತಿದೆ. 1/4

ಭಾರತ ಸರ್ಕಾರವು ರಾಜ್ಯ ಸರ್ಕಾರದ

ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಉಪ
ನಗರ ರೈಲು ಯೋಜನೆಯನ್ನು
ಕೈಗೆತ್ತಿಕೊಳ್ಳುವುದಾಗಿ ಘೋಷಿಸಿದೆ. ಈ
ಯೋಜನೆಯ ತ್ವರಿತ ಅನುಷ್ಠಾನಕ್ಕೆ
$\frac{1}{2}$ ಇಲಾಖೆಯು/ ಕ್ರಮವಹಿಸಲಿದ್ದು, ಈ
ಕಾರ್ಯಕ್ರಮಕ್ಕಾಗಿ ಪ್ರಾರಂಭಿಕವಾಗಿ ನೂರು
ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು.
ಯುವ ಜನತೆ ನಮ್ಮ ಭವಿಷ್ಯದ ಭರವಸೆಯ
ಬೆಳಕಾಗಿದ್ದಾರೆ. ಆಧುನಿಕ ಸಮಾಜದಲ್ಲಿ
$\frac{3}{4}$ ಮಹತ್ವಾಕಾಂಕ್ಷಿಯಾಗಿ/ ಬೆಳೆಯುತ್ತಿರುವ
ಯುವ ಜನತೆ ಸ್ವಾವಲಂಬಿಯಾಗಿ ತಮ್ಮ ಜೀವನ
ರೂಪಿಸಿಕೊಳ್ಳಲು ನೆರವಾಗುವುದು ನಮ್ಮ
ಕರ್ತವ್ಯವಾಗಿದೆ. ಬದಲಾಗಿರುವ ಕಾಲದಲ್ಲಿ
ಉದ್ಯೋಗದ ಅವಕಾಶ ಹೆಚ್ಚಿರುವುದು
6 ಮಾತ್ರವಲ್ಲ ಉದ್ಯೋಗದ ರೂಪX ವಿನ್ಯಾಸಗಳು
ಸಹ ಬದಲಾಗಿವೆ. ಉದ್ಯೋಗದ ಅವಕಾಶವನ್ನು
ಯುವ ಜನತೆ ಬಳಸಿಕೊಳ್ಳಬೇಕಾದರೆ
ಅವರನ್ನು ಅವಶ್ಯಕ ಕೌಶಲ ಮತ್ತು
ಸಾಮರ್ಥ್ಯದೊಂದಿಗೆ ಸನ್ನದ್ಧಗೊಳಿಸಬೇಕಾಗಿದೆ.
ಎಲ್ಲಾ ಕೌಶಲ್ಯಾಭಿವೃದ್ಧಿ ಕಾರ್ಯ/ಕ್ರಮಗಳನ್ನು $\frac{1}{4}$
ಉದ್ಯೋಗಾವಕಾಶ ಹೆಚ್ಚಿಸುವ ಏಕೈಕ
ಉದ್ದೇಶದಿಂದ ಒಂದೇ ಇಲಾಖೆಯಡಿ ತರಲು
ಉದ್ದೇಶಿಸಿದ್ದು ಕೌಶಲ್ಯಾಭಿವೃದ್ಧಿ ಮತ್ತು
ಜೀವನೋಪಾಯ ಇಲಾಖೆಯನ್ನು
ಸೃಜಿಸಲಾಗುವುದು.

ನಮ್ಮ ರಾಜ್ಯದಲ್ಲಿ ವ್ಯಾಪಾರ ಉದ್ದಿಮೆ/ $\frac{1}{2}$
ಮಾಡುವುದನ್ನು ಸುಲಭಗೊಳಿಸುವಿಕೆಗೆ
ಸೌಕರ್ಯಗಳನ್ನು ಕಲ್ಪಿಸುವುದು ನಮ್ಮ
ಪ್ರಯತ್ನವಾಗಿದೆ. ಈ ದಿಸೆಯಲ್ಲಿ ನಮ್ಮ
ಪ್ರಯತ್ನಗಳಿಗೆ ಪೂರಕವಾಗಿ ವಾಣಿಜ್ಯೋದ್ಯಮಗಳು
ತಮ್ಮ ಹೆಚ್ಚಿನ ಅನುಸರಣೆಯಿಂದ ಸ್ಪಂದಿಸಿ
ಪ್ರೋತ್ಸಾ/ಹಿಸುತ್ತಿರುವುದಕ್ಕೆ ನಾನು ಅವರಿಗೆ $\frac{3}{4}$
ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈಗ
ಆಯವ್ಯಯವನ್ನು ಸದನದ ಪರಿಗಣನೆಗಾಗಿ
ಮಂಡಿಸುತ್ತಿದ್ದೇನೆ ಹಾಗೂ ಆಯವ್ಯಯ
ವೆಚ್ಚವನ್ನು ನಿರ್ವಹಿಸಲು ಲೇಖಾನುದಾನವನ್ನು
ಕೋರುತ್ತಿದ್ದೇನೆ.X 7